# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಸರ್ಕಾರಿ ನೌಕರರಾದ ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕ್ 1) ಕಗ್ಗೆರೆ ಗ್ರಾಮ ಪಂಚಾಯತ್ ಕಾರ್ಯದರ್ಶಿಯಾದ ಶ್ರೀ ಕೃಷ್ಣಪ್ಪ ಮತ್ತು 2)ಪಂಚಾಯತ್ ರಾಜ್ ಇಂಜಿನಿಯರಿಂಗ್‌ನ ಕಿರಿಯ ಅಭಿಯಂತರರಾದ ಶ್ರೀ ಕ್ಷೇತ್ರಪಾಲ ರವರು ಕರ್ತವ್ಯಲೋಪ/ದುರ್ವರ್ತನೆ ಎಸಗಿರುವ ಬಗ್ಗೆ-ಆದೇಶ.

**ಓದಲಾಗಿದೆ:** 1. ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ:ಕಂಪ್ಲೇಂಟ್/ಉಪಲೋಕ್/ಬಿಡಿ/3412/2014/ಎಆರ್‌ಎಲ್‌ಓ-1, ದಿನಾಂಕ: 08-06-2017.

2. ಮಾನ್ಯ ಉಪಲೋಕಾಯಕ್ತರವರ ವರದಿ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ ಬಿಡಿ/3412/2014/ಸನಿಕಾಸ-1, ದಿನಾಂಕ: 18-05-2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ನಿಬಂಧಕರು ಕರ್ನಾಟಕ ಲೋಕಾಯುಕ್ತ ಇವರ ಪತ್ರದ ಸಂಗಡ ಲಗತ್ತಿಸಿರುವ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಸೆಕ್ಷನ್ 12(3) ರ ಅಡಿಯಲ್ಲಿ ಸಲ್ಲಿಸಿರುವ ದಿನಾಂಕ: 18-05-2017ರ ವರದಿಯಲ್ಲಿ ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕ್ ಕಗ್ಗೆರೆ ಗ್ರಾಮ ಪಂಚಾಯತ್ ಸದಸ್ಯರು ಮತ್ತು ವಕೀಲರಾದ ಶ್ರೀ ವಿ.ಲಾವಾ ಬಿನ್ ಕೆ.ಟಿ.ವೆಂಕಟರಾಮು (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕ್ 1) ಕಗ್ಗೆರೆ ಗ್ರಾಮ ಪಂಚಾಯತ್ ಕಾರ್ಯದರ್ಶಿಯಾದ ಶ್ರೀ ಕೃಷ್ಣಪ್ಪ ಮತ್ತು 2) ಪಂಚಾಯತ ರಾಜ್ ಇಂಜಿನಿಯರಿಂಗ್‌ನ ಕಿರಿಯ ಅಭಿಯಂತರರಾದ ಶ್ರೀ ಕ್ಷೇತ್ರಪಾಲ (ಇನ್ನು ಮುಂದೆ "1 ಮತ್ತು 2ನೇ ಎದುರುದಾರರು" ಎಂದು ಕ್ರಮವಾಗಿ ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

**ದೂರಿನ ಸಂಕ್ಷಿಪ್ತ ವಿವರಣೆ:**

ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕ್ ಕಗ್ಗೆರೆ ಗ್ರಾಮ ಪಂಚಾಯತ್‌ನಲ್ಲಿ ಬಾರಿ ಅವ್ಯವಹಾರ ನಡೆದಿದ್ದು, ಸದರಿ ಗ್ರಾಮ ಪಂಚಾಯತ್‌ಗೆ ಸಂಬಂಧಪಟ್ಟಂತೆ 2012-13ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ದಿ:22-09-2014ರಂದು ನಡೆದಿದ್ದು, ಆ ಸಂದರ್ಭದಲ್ಲಿ ಎದುರುದಾರರು ಕೆಲವು ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದಾರೆ. ಅಲ್ಲದೇ, ದಿ:04-02-2014ರಂದು ಎಂಜಿಎನ್‌ಆರ್‌ಜಿಎ ಯೋಜನೆ ಅಡಿ ನಡೆದ ಅವ್ಯವಹಾರದ ಬಗ್ಗೆ ಒಂಬುಡ್ಸ್‌ಮನ್ ರವರಿಗೆ ದುರು ನೀಡಿದ್ದು, ಅದರಲ್ಲಿ ಕಗ್ಗೆರೆ ಗ್ರಾಮದ ಪಿಡಬ್ಲೂಡಿ ರಸ್ತೆಯಿಂದ ಮುನೇಶ್ವರ ದೇವಸ್ಥಾನದ ರಸ್ತೆ ಅಭಿವೃದ್ಧಿ ಅನುಷ್ಠಾನಕ್ಕೆ 2013-14ರಲ್ಲಿ ರೂ.4,90,000/- ಮಂಜೂರಾಗಿದ್ದು, ಸದರಿ ಕಾಮಗಾರಿಯಲ್ಲಿ ಅವ್ಯವಹಾರವಾಗಿದೆ ಹಾಗೂ ಎಂಜಿಎನ್‌ಆರ್‌ಜಿಎ ಯೋಜನೆಯ 2009-10 ಮತ್ತು 2013-14ನೇ ಸಾಲಿನಲ್ಲಿ ಅವ್ಯವಹಾರವಾಗಿದೆಯೆಂದು ಹೇಳಿದ್ದಾರೆ.

**ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ-**

ಪಿಡಬ್ಲೂಡಿ ರಸ್ತೆಯಿಂದ ದೇವಸ್ಥಾನದ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಒಂಬುಡ್ಸಮನ್ ರವರು ಪರಿಶೀಲಿಸಿ ಆಕ್ಷೇಪಣೆ ವ್ಯಕ್ತಪಡಿಸಿದ ಕಾರಣ ಈ ಬಗ್ಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಚಿಸಿದ್ದು, ನಿಯಮಾನುಸಾರ ಕ್ರಮ ಕೈಗೊಂಡು ಕಾಮಗಾರಿ ಮುಕ್ತಾಯಗೊಳಿಸಲಾಗಿದೆ. ಈ ಕಾಮಗಾರಿಗೆ ಯಾವುದೇ ಹಣ ಪಾವತಿ ಮಾಡಿಲ್ಲ. ನೇತ್ರಾವತಿ ಡಿಸ್ಟಿಲರಿ ಕಾರ್ಖಾನೆಗೆ ಜನರಲ್ ಲೈಸನ್ಸ್ ಅನ್ನು ಸಭಾ ನಡವಳಿಯ ತೀರ್ಮಾನದಂತೆ ನೀಡಲಾಗಿದೆ. 2009-10ನೇ ಸಾಲಿನಲ್ಲಿ ಈ ಹಿಂದೆಯಿದ್ದ ಕಾರ್ಯದರ್ಶಿಗಳಾದ ಶ್ರೀ ನಂದಕೃಷ್ಣ ಮತ್ತು ಅಧ್ಯಕ್ಷರಾದ ಶ್ರೀ ಮಾಯಣ್ಣರವರು ಬಸವನ ಮತ್ತಿಕೆರೆ ಗ್ರಾಮದ ಎಸ್‌ಸಿ ಕಾಲೋನಿಯಿಂದ ಗ್ರಾಮದವರೆಗೆ 2009-10ನೇ ಸಾಲಿನಲ್ಲಿ ಎಂಜಿಎನ್‌ಆರ್‌ಜಿಎ ಯೋಜನೆ ಅಡಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಂಬಂಧಿಸಿದಂತೆ

ಕೂಲಿ ಕಾರ್ಮಿಕರ ಉದ್ಯೋಗ ಒದಗಿಸುವ ಯೋಜನೆಯಡಿ ಕಾನೂನುಬಾಹಿರವಾಗಿ ರೂ.2,32,660/-ನ್ನು ಬೇರೆಯವರ ಹೆಸರಿಗೆ ಚೆಕ್ ನೀಡಿ ಹಣ ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ಕಾರ್ಯನಿರ್ವಹಣಾಧಿಕಾರಿಗಳು ನೀಡಿದ ದೂರಿಗೆ ಸಂಬಂಧಪಟ್ಟಂತೆ ಅಮೃತೂರು ಠಾಣಾ ಮೊಕದ್ದಮೆ ಸಂ:190/2009ರಂತೆ ಐಪಿಸಿ ಕಲಂ 406, 409, 420 ಸಹ ಕಲಂ 34 ರಡಿ ಪ್ರಕರಣ ದಾಖಲಾಗಿದೆ. ಈ ಬಗ್ಗೆ ತನಿಖೆ ನಡೆಸಲು ದಾಖಲೆಗಳನ್ನು ಪೋಲಿಸರು ಪಡೆದಿದ್ದಾರೆ. 2011-12 ಮತ್ತು 2013-14ನೇ ಸಾಲಿನಲ್ಲಿ ಯಾವುದೇ ಅವ್ಯವಾಹರ ನಡೆದಿಲ್ಲವೆಂದು ಹೇಳಿದ್ದಾರೆ.

**ಎರಡನೇ (2ನೇ)ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ-**

ಸದರಿ ಗ್ರಾಮ ಪಂಚಾಯತ್‌ನ ಪಿಡಬ್ಲೂಡಿ ರಸ್ತೆಯಿಂದ ಮುನೇಶ್ವರ ದೇವಸ್ಥಾನದ ರಸ್ತೆಯ ಅಭಿವೃದ್ಧಿ ಕಾಮಗಾರಿಯನ್ನು ಎಂಜಿಎನ್‌ಆರ್‌ಜಿಎ ಯೋಜನೆ ಅಡಿ 2013-14ನೇ ಸಾಲಿನಲ್ಲಿ ಅಂದಾಜು ರೂ.4.90 ಲಕ್ಷಗಳಿಗೆ ಕಾಮಗಾರಿ ಕೈಗೊಂಡಿದ್ದು, ಈ ಬಗ್ಗೆ ಅಳತೆ ಪುಸ್ತಕವನ್ನು ತಯಾರಿಸಲು ಜಿಲ್ಲಾ ಪಂಚಾಯತ್‌ನಿಂದ ತಾತ್ಕಾಲಿಕವಾಗಿ ನೇಮಿಸಿಕೊಂಡಿದ್ದ ಅಭಿಯಂತರರು ಅಳತೆಯನ್ನು ಸರಿಯಾದ ರೀತಿ ನಮೂದಿಸದ ಕಾರಣ ಈ ದಾಖಲೆಯ ಪರಿಶೀಲನೆಯನ್ನು ತಮಗೆ ವಹಿಸಿದ್ದು, ದಿ:04-02-2014ರಂದು ಒಂಬುಡ್ಸ್‌ಮನ್‌ರವರು ಭೇಟಿ ನೀಡಿದ ಸಂದರ್ಭದಲ್ಲಿ ಕೂಲಿಗರರ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸಿ ಆದೇಶಿಸಿರುವ ಹಿನ್ನೆಲೆಯಲ್ಲಿ ತಮ್ಮ ಮೇಲಿನ ಆರೋಪಕ್ಕೆ ಕಾರಣವಾಗಿದೆ. ಇದರಲ್ಲಿ ತಮ್ಮದು ಯಾವುದೇ ಕರ್ತವ್ಯಲೋಪ ಇಲ್ಲ. ಸ್ಥಳಿಯ ಕಾಮಗಾರಿ ಅನುಷ್ಠಾನದಲ್ಲಿ ಕೂಲಿಗಾರರ ಆಯ್ಕೆ ಮತ್ತು ಕೂಲಿ ಬಟಾವಡೆಯ ಸಂಪೂರ್ಣ ಜವಾಬ್ದಾರಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಕಾರ್ಯದರ್ಶಿಯವರದ್ದಾಗಿದೆ. ಅಲ್ಲದೆ, ಅಳತೆ ಮತ್ತು ಪರಿಮಾಣ ಮತ್ತು ಗುಣಮಟ್ಟ ಕಾಪಾಡಿಕೊಂಡು ಕಾಮಗಾರಿ ಅನುಷ್ಠಾನಗೊಳಿಸಿವ ಜವಾಬ್ದಾರಿ ನಮ್ಮದಾಗಿದೆಯೆಂದು ಹೇಳಿದ್ದಾರೆ.

ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿಲ್ಲ.

**ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವಂಶಗಳೇನೆಂದರೆ-**

ಸದರಿ ಗ್ರಾಮ ಪಂಚಾಯತಿ ವ್ಯಾಪ್ತಿಯಬ ಪಿಡಬ್ಲೂಡಿ ರಸ್ತೆಯಿಂದ ಮುನೇಶ್ವರ ದೇವಸ್ಥಾನದ ರಸ್ತೆವರೆಗಿನ ಕಾಮಗಾರಿಯು ಸರ್ಕಾರದಿಂದ ಮಂಜೂರಾಗಿದ್ದು, ಸದರಿ ಕಾಮಗಾರಿ ಕಳಪೆಯಿಂದ ಕೂಡಿರುವ ಬಗ್ಗೆ ಒಂಬಡ್ಸ್‌ಮನ್ ರವರು ಸ್ಥಳ ಪರಿಶೀಲನೆ ಮಾಡಿ, ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿ, ಸದರಿ ಕಾಮಗಾರಿಗಳನ್ನು ನಿರ್ವಹಿಸುವಂತೆ ನಿರ್ದೇಶನ ನೀಡಿದ್ದಾರೆ. ಅದರಂತೆ, ಸದರಿ ಕಾಮಗಾರಿಯನ್ನು ನಿರ್ವಹಣೆ ಮಾಡಿದ್ದು, ಈ ಬಗ್ಗೆ ಹಣ ಪಾವತಿ ಮಾಡಿಲ್ಲ. ಅದೇ ರೀತಿ 2009-10ನೇ ಸಾಲಿನ ಅವಧಿಯಲ್ಲಿ ಕಾರ್ಯದರ್ಶಿಗಳಾದ ಶ್ರೀ ನಂದಕೃಷ್ಣ ಮತ್ತು ಅಧ್ಯಕ್ಷರಾದ ಶ್ರೀ ಮಾಯಣ್ಣರವರು ಬಸವನ ಮತ್ತಿಕೆರೆ ಗ್ರಾಮದ ಎಸ್‌ಸಿ ಕಾಲೋನಿಯಿಂದ ಗ್ರಾಮದವರೆಗೆ ಎಂಜಿಎನ್‌ಆರ್‌ಜಿಎ ಯೋಜನೆ ಅಡಿ ಕಾಮಗಾರಿ ಕೈಗೊಂಡು ಅದರಲ್ಲಿ ರೂ.2,32,660/-ನ್ನು ಬೇರೆ ವ್ಯಕ್ತಿಯ ಹೆಸರಿಗೆ ಚೆಕ್ ನೀಡಿ, ಹಣ ಡ್ರಾ ಮಾಡಿದ್ದು, ಈ ಸಂಬಂಧವಾಗಿ ಅಮೃತೂರು ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿ ವಿಚಾರಣಾ ಹಂತದಲ್ಲಿದೆ. ಅದೇ ರೀತಿ 2013-14ನೇ ಸಾಲಿನ ಎಂಜಿಎನ್‌ಆರ್‌ಜಿಎ ಯೋಜನೆ ಅಡಿ ಪಿಡಬ್ಲೂಡಿ ರಸ್ತೆಯಿಂದ ಅಂದರೆ, ಕಲ್ಯಾಣಿ ಮುಂಭಾಗದ ರಸ್ತೆಯಿಂದ ಕಾಲುವೆ ಜಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ರೂ.4.90 ಲಕ್ಷಕ್ಕೆ ಹಾಗೂ ಮುಂದುವರೆದ ಕಾಮಗಾರಿಯೆಂದು ರೂ.4 ಲಕ್ಷಕ್ಕೆ ಅನುಮೋದಿಸಲಾಗಿದ್ದು, ಸದರಿ ಕಾಮಗಾರಿಗೆ ಸಂಬಂಧಪಟ್ಟಂತೆ ಎಂಬಿ ಪುಸ್ತಕದಲ್ಲಿ ಸಂಬಂಧಪಟ್ಟ ಇಂಜಿನಿಯರವರು ದಾಖಲಿಸಿದ್ದರೂ ಸಹ ಕೂಲಿ ಕಾರ್ಮಿಕರಿಗೆ ಹಣ ಪಾವತಿಸಿಲ್ಲ. ಸದರಿ ಕಾಮಗಾರಿಗಳನ್ನು ನಿರ್ವಹಿಸಿರುವ ಬಗ್ಗೆ ಯಾವುದೇ ಫೋಟೋ ಅಥವಾ ಸಿಡಿ ಇಲ್ಲ. ಎಂಜಿಎನ್‌ಆರ್‌ಜಿಎ ಮಾರ್ಗಸೂಚಿಗಳನ್ವಯ ಸದರಿ ಕಾರ್ಮಿಕರು ಕಾಮಗಾರಿಗಳನ್ನು ಕಾರ್ಮಿಕರಿಂದ ನಿರ್ವಹಿಸಿರುವ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಸದರಿ ಕಾರ್ಮಿಕರು ಕಾಮಗಾರಿಗಳನ್ನು ನಿರ್ವಹಿಸಿ ಕೂಲಿ ಹಣ ಅವರ ಖಾತೆಗೆ ಜಮಾ ಆದ ಬಗ್ಗೆ ಯಾವೂದೇ ದಾಖಲೆಗಳಿಲ್ಲ. ಸದರಿ ಕಾಮಗಾರಿಗಳನ್ನು ನಿರ್ವಹಿಸಿದ ಕಾರ್ಮಿಕರು ಜಾಬ್ ಕಾರ್ಡ ಹೊಂದಿರುವ ಬಗ್ಗೆ ಸದರಿ ಜಾಬ್ ಕಾರ್ಡ ಪ್ರತಿಗಳಿಲ್ಲ. ಸದರಿ ಕಾಮಗಾರಿ ನಿರ್ವಹಿಸಿದ ಕಾರ್ಮಿಕರು ಉದ್ಯೋಗ ಕೋರಿ ಎದುರುದಾರರಿಗೆ ಅರ್ಜಿ ಸಲ್ಲಿಸಿದ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಸದರಿ ಕಾರ್ಮಿಕರು ಬ್ಯಾಂಕ್‌ನಲ್ಲಿ ಖಾತೆ ಹೊಂದಿರುವ ಬಗ್ಗೆ ಪಾಸ್ ಪುಸ್ತಕ ಅಥವಾ ಖಾತೆಯ ಉದ್ಧೃತ ಭಾಗವು ಇಲ್ಲ. ಕೆಎಫ್‌ಸಿ ಪರಿಚ್ಛೇದ 57 ರ ಪ್ರಕಾರ ಪ್ರತಿಯೊಂದು ಖರ್ಚಿನ ಬಗ್ಗೆ ವೋಚರ್‌ಗಳು ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಹೊಂದಿರಬೇಕೆಂದು ಮಾಹಿತಿ ಇದೆ. ಅದೇ ರೀತಿ, ಕೆಎಫ್‌ಸಿ ಪರಿಚ್ಛೇದ 17ರ ಪ್ರಕಾರ ಅಗತ್ಯವಿರುವ ಸರಕು

ಸಾಮಗ್ರಿಗಳನ್ನು ಮಾರುಕಟ್ಟೆಯಲ್ಲಿ ಖರೀದಿಸುವ ಸಾಧಿಲ್ವಾರು ವೆಚ್ಚದ ಕೈಪಿಡಿ 1958, ನಿಯಮಗಳ ನಿಯಮ 55(49)(ಎ) ರಲ್ಲಿ ರೂ.500/-ಗಳ ಮಿತಿಯನ್ನು ರೂ.5,000/-ಗಳಿಗೆ ಹೆಚ್ಚಿಸಿ ಆದೇಶಿಸಲಾಗಿದೆ. ರೂ.5,000/- ಮೀರಿದ ರೂ.1,00,000/- ದವರೆಗಿನ ಖರೀದಿಗಳನ್ನು ಕೊಟೇಷನ್ ಕರೆಯುವ ಮೂಲಕ ಕರೆಯತಕ್ಕದ್ದು, ರೂ.1 ಲಕ್ಷ ಮೀರಿದ ಖರೀದಿಗೆ ಕೆಟಿಪಿಪಿ ನಿಯಮ ಅನ್ವಯವಾಗುವುದೆಂದುತಿಳಿಸಿದೆ. ಆದರೆ, ಎದುರುದಾರರು ಈ ಎಲ್ಲಾ ಕಾನೂನಿನ ಅಂಸಗಳನ್ನು ಅನುಸರಿಸದೇ, ಈ ಎಲ್ಲಾ ಕಾಮಗಾರಿಗಳ ನಿಯಮಾನುಸಾರ ಕೊಟೇಷನ್ ಕರೆದುಅತ್ಯಂತ ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರಿಗೆ ಹಾಗೂ ಸರಬರಾಜುದಾರರಿಗೆ ಕಛೇರಿ ಆದೇಶ ನೀಡಿ ಚೆಕ್ ಮೂಲಕ ಹಣ ಪಾವತಿಸಿದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ಸದರಿ ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ಆ ಕಾಮಗಾರಿ ಫೋಟೊ ಅಥವಾ ಸಿಡಿ ಅನ್ನು ಹಾಜರುಪಡಿಸಿಲ್ಲ. ಕಾರಣ, ಸದರಿ ಕಾಮಗಾರಿಯನ್ನು ಎದುರುದಾರರು ನಿರ್ವಹಣೆ ಮಾಡದೇ, ಸುಳ್ಳು ದಾಖಲೆಗಳನ್ನುಸೃಷ್ಟಿಸಿ ಮತ್ತು ಆಡಿಟ್ ವರದಿಗೆ ಸಂಬಂಧಪಟ್ಟಂತೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ.

ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಆಕ್ಷೇಪಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರು ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ಇಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಮೇಲ್ನೋಟಕ್ಕೆ ಕಂಡುಬರುತ್ತದೆ.

ಆದುದರಿಂದ, 1) ಶ್ರೀ ಕೃಷ್ಣಪ್ಪ, ಕಾರ್ಯದರ್ಶಿ, ಕಗ್ಗೆರೆ ಗ್ರಾಮ ಪಂಚಾಯತ್, ಕುಣಿಗಲ್ ತಾಲ್ಲೂಕ್, ತುಮಕೂರು ಜಿಲ್ಲೆ ಮತ್ತು 2) ಶ್ರೀ ಕ್ಷೇತ್ರಪಾಲ, ಕಿರಿಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್, ಕುಣಿಗಲ್ ತಾಲ್ಲೂಕ್, ತುಮಕೂರು ಜಿಲ್ಲೆ ಸದರಿ ಎದುರುದಾರರುಗಳು ಸರ್ಕಾರಿ ನೌಕರರಾಗಿದ್ದು, ಸದರಿ ಎದುರುದಾರರುಗಳ ವಿರುದ್ಧ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಾವಳಿ 1966ರ ನಿಯಮ 3(1) ರನ್ವಯ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, 1 ಮತ್ತು 2ನೇ ಎದುರುದಾರರುಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು, ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿರ್ಭಂಧ, ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರಡಿಯಲ್ಲಿ ಸದರಿಯವರ ವಿರುದ್ಧ ಇಲಾಖಾ ವಿಚಾರಣೆಯನ್ನು ಈ ಪ್ರಾಧಿಕಾರಕ್ಕೆ ವಹಿಸಬೇಕೆಂದು ಕೋರಿದೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ, ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/524/ಗ್ರಾಪಂಕಾ/2017 ಬೆಂಗಳೂರು, ದಿನಾಂಕ: 06-07-2017.</u>**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ 1) ಶ್ರೀ ಕೃಷ್ಣಪ್ಪ, ಕಾರ್ಯದರ್ಶಿ, ಕಗ್ಗೆರೆ ಗ್ರಾಮ ಪಂಚಾಯತ್, ಕುಣಿಗಲ್ ತಾಲ್ಲೂಕ್, ತುಮಕೂರು ಜಿಲ್ಲೆ ಮತ್ತು 2) ಶ್ರೀ ಕ್ಷೇತ್ರಪಾಲ, ಕಿರಿಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್, ಕುಣಿಗಲ್ ತಾಲ್ಲೂಕ್, ತುಮಕೂರು ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಾವಳಿಗಳ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ-8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ ಸಂಖ್ಯೆ 1 ರಿಂದ 267 ರವರೆಗಿನ ಮೂಲದಾಖಲೆಗಳನ್ನು ಈ ಪತ್ರದೊಂದಿಗೆ ಹಿಂದಿರುಗಿಸಲಾಗಿದೆ)
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ತುಮಕೂರು ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಕುಣಿಗಲ್, ತುಮಕೂರು ಜಿಲ್ಲೆ.
6. ಶ್ರೀ ಕೃಷ್ಣಪ್ಪ, ಕಾರ್ಯದರ್ಶಿ, ಕಗ್ಗೆರೆ ಗ್ರಾಮ ಪಂಚಾಯತ್, ಕುಣಿಗಲ್ ತಾಲ್ಲೂಕ್, ತುಮಕೂರು ಜಿಲ್ಲೆ.
7. ಶ್ರೀ ಕ್ಷೇತ್ರಪಾಲ, ಕಿರಿಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್, ಕುಣಿಗಲ್ ತಾಲ್ಲೂಕ್, ತುಮಕೂರು ಜಿಲ್ಲೆ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
9. ಗಣಕ ಕೋಶ.